ಈಗಲಾದರೂ ತಕ್ಷಣ ಸರ್ಕಾರ ಇದಕ್ಕೆ ಸ್ಪಂದನೆ ಮಾಡಿ ಗಡಿಭಾಗ ಅಂದರೆ ಬೀದರ್ ಜಿಲ್ಲೆ ಸಂಪೂರ್ಣ ಕರ್ನಾಟಕ ರಾಜ್ಯದ ನಕಾಶೆಯಲ್ಲಿ ಇಲ್ಲವೆನ್ನುವಂತಹದು ಆಗಿದೆ. ಈಗಲಾದರೂ ಸರ್ಕಾರ ಕ್ರಮ ವಹಿಸದೇ ಇದ್ದರೆ ಅಲ್ಲಿ ಬಹಳ ದುಷ್ಪರಿಣಾಮಗಳು ಆಗುತ್ತವೆ ಎಂದು ನಾನು ಸರ್ಕಾರಕ್ಕೆ ತಿಳಿಸಬಯಸುತ್ತೇನೆ.

ಶ್ರೀ ಸಿ.ಎಂ.ಉದಾಸಿ(ಲೋಕೋಪಯೋಗಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಈಶ್ವರ ಭೀಮಣ್ಣ ಖಂಡ್ರೆಯವರು ಹೇಳಿರುವಂತಹ ವಿಷಯದಲ್ಲಿ ಅವರ ಗಮನಕ್ಕೆ ತರುವ ಕೆಲಸವನ್ನು ನಾವು ಈ ಮೊದಲೇ ಮಾಡಿದ್ದೇವೆ. ಸಾಯುಗಾರದ bridgeಅನ್ನು ಮಾತ್ರ KRDCL ನಿಂದ ಮಾಡುವುದಕ್ಕೆ ಈಗಾಗಲೇ ನಾವು ಕ್ರಮ ಕೈಗೊಂಡಿದ್ದೇವೆ. ಕೊಂಗಲಿ ಮತ್ತು ಹಲತೂಗ ಗ್ರಾಮಗಳಿಗೆ ಸ್ವಲ್ಪ ವಿಳಂಬವಾಗುವುದು, ಸ್ವಲ್ಪ ಸಮಯದ ನಂತರ ಅವರೆಡೂ ಸೇತುವೆಗಳನ್ನು ಮಾಡುತ್ತೇವೆ ಎನ್ನುವ ಭರವಸೆಯನ್ನು ಕೊಡುವುದಕ್ಕೆ ಇಚ್ಚೆಪಡುತ್ತೇನೆ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಬಹಳ ವಿಳಂಬವಾಗಿದೆ..

ಅಧ್ಯಕ್ಷರು: ಈಗಾಗಲೇ ಮಾನ್ಯ ಸಚಿವರು ಹೇಳಿದ್ದಾರೆ. ಈಗ ನಿಯಮ 60 ರ ಮೇಲೆ ಚರ್ಚೆ.

ಶ್ರೀ ವೆಂಕಟರಾವ್ ನಾಡಗೌಡ:ಮಾನ್ಯ ಅಧ್ಯಕ್ಷರೆ, ನನ್ನದೊಂದು ಶೂನ್ಯವೇಳೆ.

ಅಧ್ಯಕ್ಷರು: ಶೂನ್ಯವೇಳೆ ಮುಗಿಯಿತು. ನೀವು ನೋಟಿಸ್ ಕೊಡಲಿಲ್ಲ.

ಶ್ರೀ ವೆಂಕಟರಾವ್ ನಾಡಗೌಡ: ಕೊಟ್ಟಿದ್ದೇನೆ.

ಅಧ್ಯಕ್ಷರು: ಇವತ್ತು ಇಲ್ಲ.

ಶ್ರೀ ವೆಂಕಟರಾವ್ ನಾಡಗೌಡ: ನೀವು ಕರೆದಿದ್ದರಂತೆ, ನಾನು ಎರಡು ನಿಮಿಷ ಹೊರಗೆ ಹೋಗಿದ್ದೆ. ಶೂನ್ಯವೇಳೆಯಲ್ಲಿ ಈ ವಿಷಯ ಇದೆ.

ಅಧ್ಯಕ್ಷರು: ನಾನು ಕರೆದಾಗ ನೀವು ಇರಲಿಲ್ಲ ಈಗ ಹೇಳಿ.

6) ವಿಷಯ: ನೆಮ್ಮದಿ ಕೇಂದ್ರಗಳಿಂದ ಸಕಾಲದಲ್ಲಿ ಆದಾಯ ಪ್ರಮಾಣ ಪತ್ರ ದೊರೆಯದಿರುವ ಬಗ್ಗೆ.

ಶ್ರೀ ವೆಂಕಟರಾವ್ ನಾಡಗೌಡ(ಸಿಂಧನೂರು): ಮಾನ್ಯ ಅಧ್ಯಕ್ಷರೆ, ರಾಜ್ಯದ ತಾಲ್ಲೂಕು ಕೇಂದ್ರಗಳಲ್ಲಿರುವ ಕಂದಾಯ ಇಲಾಖೆಯ ವ್ಯಾಪ್ತಿಗೆ ಬರುವ ನೆಮ್ಮದಿ ಕೇಂದ್ರಗಳಿಂದ ಜನಸಾಮಾನ್ಯರಿಗೆ ಸಕಾಲದಲ್ಲಿ ಆದಾಯ ಪ್ರಮಾಣ ಪತ್ರ

ದೊರೆಯದಿರುವುದರಿಂದ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ವಿತರಿಸುತ್ತಿರುವ ಪಡಿತರ ಚೀಟಿಯನ್ನು ಪಡೆಯಲು ತೊಂದರೆಯಾಗುತ್ತಿರುವ ಬಗ್ಗೆ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರ ಗಮನವನ್ನು ನಾನು ಶೂನ್ಯವೇಳೆಯಲ್ಲಿ ಸೆಳೆಯಬಯಸುತ್ತೇನೆ.

ಅಧ್ಯಕ್ಷರು: ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಸದನದಲಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್: ಅವರು ವಿಧಾನ ಪರಿಷತ್‌ಗೆ ಹೋಗಿದ್ದಾರೆ.

ಅಧ್ಯಕ್ಷರು: ಅವರು ಬಂದ ಮೇಲೆ ಉತ್ತರ ಕೊಡುತ್ತಾರೆ.

ಅಧ್ಯಕ್ಷರು: ಮಾನ್ಯ ಹೆಚ್.ಡಿ.ರೇವಣ್ಣನವರೆ ಈ ವಿಷಯ ನಿಲುವಳಿ ಸೂಚನೆಯಲ್ಲಿ ಎಲ್ಲಿ ಬರುತ್ತದೆ.?

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಈ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ನಂತರ ಏನು ಬೇಕಾದರೂ ಹೇಳಿ.

ಅಧ್ಯಕ್ಷರು: ಆಯಿತು. ಪ್ರಸ್ತಾಪ ಮಾಡಿ.

3. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ: ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶದ ನಿರಂತರ ವಿದ್ಯುತ್ ಯೋಜನೆಯಡಿ ಸುಮಾರು 2,600 ಕೋಟಿ ರೂಪಾಯಿಗಳಿಗೆ ಟೆಂಡರ್ ಕರೆದಿರುವ ಬಗ್ಗೆ

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶದ ನಿರಂತರ ವಿದ್ಯುತ್ ಯೋಜನೆಯಡಿಯಲ್ಲಿ ಸುಮಾರು 2600 ಕೋಟಿ ರೂ.ಗಳಿಗೆ ಟೆಂಡರ್ ಕರೆದು ಅಂದಾಜು ತಯಾರು ಮಾಡಿದ್ದಾರೆ.

ಅಧ್ಯಕ್ಷರು: ಎಲ್ಲವನ್ನೂ ನಿಯಮ 60 ರಲ್ಲಿ ಚರ್ಚೆಗೆ ತಂದರೆ ಈ ನಿಯಮ ಅರ್ಥವನ್ನೇ ಕಳೆದುಕೊಂಡು ಬಿಡುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ: ಒಂದು ನಿಮಿಷ ಪ್ರಸ್ತಾಪ ಮಾಡುತ್ತೇನೆ. ಇವತ್ತು ಅರ್ಧ ಗಂಟೆ, ವಿದ್ಯುತ್ ಬರುತ್ತಿಲ್ಲ. ಕೆಲವು ಕಡೆ ಒಂದು ಗಂಟೆ, ಎರಡು ಗಂಟೆಗಳ ಕಾಲ ಕರೆಂಟೆ ಬರುತ್ತಿಲ್ಲ. ತಾವು ಪ್ರಸ್ತಾಪ ಮಾಡುವುದೇ ಬೇಡವೆಂದರೆ ಹೇಗೆ? ಅವರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ನಾನು ಪ್ರಸ್ತಾಪ ಮಾಡುತ್ತಿದ್ದೇನೆ.

ಅಧ್ಯಕ್ಷರು: ಆಯಿತು. ಪ್ರಸ್ತಾಪ ಮಾಡಿ.